# *Form No.4.*

# *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**CC :11/2024**

**CW9**

**PW7**

ಸಾಕ್ಷಿಯ ಹೆಸರು : ಅಶೋಕ್ ರಾಜೇಂದ್ರ ಕಾಮತ್

ತಂದೆ ಹೆಸರು : ರಾಮ ಕಾಮತ್

ಪ್ರಾಯ : 60 ವರ್ಷ

ಉದ್ಯೋಗ : ವ್ಯಾಪಾರ

ವಾಸ : ಮೂಡುಬೆಳ್ಳೆ

ದಿನಾಂಕ **: 14.03.2025** ರಂದು ಪಿಡಬ್ಲ್ಯೂ - 7/ಸಿಡಬ್ಲ್ಯೂ - 9 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಹಿರಿಯ ಸ.ಸ.ಅ. ರವರಿಂದಃ

ಆರೋಪಿತರ ಪರಿಚಯ ಇರುವುದಿಲ್ಲ. ಅವರನ್ನು ಈ ಹಿಂದೆ ನಾನು ನೋಡಿರುವುದಿಲ್ಲ. ಪೋಲೀಸರು ಬಂದು ನನ್ನ ಸಹಿ ಪಡೆದುಕೊಂಡಿದ್ದಾರೆ. ಯಾವ ಉದ್ದೇಶಕ್ಕೆ ನನ್ನ ಸಹಿಯನ್ನು ಪಡೆದಿದ್ದಾರೆ ಎಂದು ನನಗೆ ತಿಳಿದಿಲ್ಲ. ಈಗ ನನಗೆ

ತೋರಿಸಿದ ಸ್ವತ್ತು ಸ್ವಾಧೀನತಾ ಮಹಜರನ್ನು ನಿಪಿ - 7 ಎಂದು ಗುರುತಿಸಲಾಯಿತು. ಸದರಿ ದಾಖಲಾತಿ ದೃಢೀಕೃತ ನಕಲಾದ ಕಾರಣ ಸಹಿಯನ್ನು ಗುರುತಿಸಲು ತಕರಾರು ಮಾಡಲಾಯಿತು. ನಿಪಿ - 7 ರಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿರಜುವುದಿಲ್ಲ ಅಥವಾ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ. ನಾನು ಪೋೀಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಹಿರಿಯ ಸ.ಸ.ಅ. ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.

<u>ಪಾಟೀ ಸವಾಲುಃ</u> ಹಿರಿಯ ಸ.ಸ.ಅ. ರವರಿಂದಃ

ದಿಃ 29.10.2010 ರಂದು 1 ಮತ್ತು 2 ನೇ ಆರೋಪಿತರು ತಾವು ಕಳ್ಳತನ ಮಾಡಿದ ಮಾಲನ್ನು ಮಾರಾಟ ಮಾಡಿದ ಸ್ಥಳವನ್ನು ಬ್ರಹ್ಮಾವರ ಪೋಲೀಸರೊಂದಿಗೆ ನಮ್ಮ ಫ್ಯಾಕ್ಟರಿಗೆ ಬಂದಿದ್ದರು ಎಂದರೆ ಸರಿಯಲ್ಲ. ನಮ್ಮ ಫ್ಯಾಕ್ಟರಿಯಲ್ಲಿ 3 ನೇ ಆರೋಪಿಯು ಮಾರಾಟ ಮಾಡಿದ್ದಾಗಿ 10 ಕೆಜಿ ತೂಕದ ಗೇರು ಬೀಜದ ತಿರುಳುಗಳಿರುವ 32 ಟಿನ್‌ಗಳು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇರುವಂತಹ 125 ಕೆಜಿ ಗೇರುಬೀಜದ ತಿರುಳುಗಳನ್ನು, 10 ಕೆಜಿ

**CC 11/2024**
**CW9**
**PW7**

ಗೇರುಬೀಜದ ತಿರುಳುಗಳುಳ್ಳ 20 ಟಿನ್ ಗಳನ್ನು ನಾನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ನಿಪಿ - 7 ರಂತೆ ಸಂಜೆ 4 ರಿಂದ 6.30 ರವರೆಗೆ ದಿಃ 29.10.2020 ರಂದು ನಮ್ಮ ಫ್ಯಾಕ್ಟರಿಯಲ್ಲಿ ಮಹಜರು ತಯಾರಿಸಿದರಾರೆ ಎಂದರೆ ಸರಿಯಲ್ಲ. ಅದನ್ನು ಒಪ್ಪಿಕೊಂಡು ನಾನು ನಿಪಿ - 7 ಕ್ಕೆ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನಂತರ ದಿಃ 11.12.2020 ರಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಪ್ರತಿಯನ್ನು ನಿಪಿ - 8 ಎಂದು ಗುರುತಿಸಲಾಯಿತು. 3 ನೇ ಆರೋಪಿಯು ಕಳ್ಳತನದ ಮಾಲನ್ನು ನಮಗೆ ತಂದು ಮಾರಾಟ ಮಾಡಿದ್ದು, ನಾನು ಗೇರುಬೀಜವನ್ನು ಸ್ವೀಕರಿಸಿ, ಹಣ ನೀಡಿದ್ದೇನೆ ಎಂದು, ಹೇಳಿಕೆ ನೀಡಿದ್ದರೂ ಸಹಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಆರೋಪಿಯು ನಮ್ಮ ಫ್ಯಾಕ್ಟರಿಯಲ್ಲಿ ಈ ಪ್ರಕರಣದ ಕಳ್ಳತನದ ಗೇರುಬೀಜಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಬ್ರಹ್ಮಾವರ ಪೋಲೀಸರು 1 ಮತ್ತು 2 ನೇ ಆರೋಪಿತರ ಜೊತೆ ನಮ್ಮ ಫ್ಯಾಕ್ಟರಿಗೆ ಬಂದು , ನಾನು ಸ್ವತ್ತುಗಳನ್ನು ಅವರ ಮುಂದೆ ಹಾಜರುಪಡಿಸಿದ್ದರೂ ಸಹಾ, ನಾನು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದೆರ ಸರಿಯಲ್ಲ. ಎಲ್ಲಾ ವಿಚಾರಗಳು ತಿಳಿದಿದ್ದರೂ ಸಹಾ 1 ರಿಂದ 3 ನೇ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.